ಸಿಗ್ನಲ್‌ಗಳ ಸಿಸಿಟೀವಿ, ಟೋಲ್ ಗೇಟ್, ಪೆಟ್ರೋಲ್ ಬಂಕ್, ಹೋಟೆಲ್... ಏನಾದರೂ ಅದರಲ್ಲಿ ವ್ಯತ್ಯಾಸ ಇದ್ರೆ ತಿಳಿಸಿ'.

'ಯೆಸ್ ಸಾರ್'.

ಅಷ್ಟರಲ್ಲಿ ಹೊರಗೆ ಹೋಗಿದ್ದ ಭುಜಂಗ ಬಂದ.

'ಸಾರ್ ನೀವು ಹೇಳಿದ ಹಾಗೆ, ಟೀಪಾಯಿ ಕೆಳಗೆ, ನನ್ನ ಮೊಬೈಲ್, ಗಣಪತಿ ಮನೇಲೇ ಬಿಟ್ಟಿದ್ನಲ್ಲ... ಈಗ ಹೋಗಿ ತಗೊಂಡು ಬಂದೆ...'

'ವಾಯ್ಸ್ ರೆಕಾರ್ಡರ್ ಪ್ಲೇ ಮಾಡಿ ನೋಡುದ್ರಾ?'

'ನೋಡ್ದೆ ಸಾರ್. ಗಣಪತಿ ಮತ್ತು ನಾಚಯ್ಯ ಹನ್ನೆರಡು ನಿಮಿಷ ಮಾತಾಡ್ಕೊಂಡಿದ್ದಾರೆ... ಎಲ್ಲಾ ನೇರಾನೇರ ಸಾರ್... ಏನು ತಲಕಿಂದ್ಲಿಲ್ಲ ಸಾರ್... ನೀವೂ ಒಂದ್ಸಾರಿ ಆನ್ ಮಾಡಿ ಕೇಳುಸ್ಕಳಿ ಸಾರ್...'

'ಸಾರ್, ನಾವು ಬರ್ತೀವಿ ಅಂತ ಗೊತ್ತಿದ್ರೂ ಎಸ್ಟೇಟ್ ಮ್ಯಾನೇಜರ್ ಚಂದ್ರನ್ ನಾಯರ್ ಎಲ್ಲೋ ಹೋಗಿದ್ದಾನೆ... ಅವನ ಫೋನು ಔಟ್ ಆಫ್ ರೀಚ್ ಬರ್ತಾ ಇದೆ. ಆಮೇಲೆ ರವಿ ಎಲ್ಲಿದ್ದಾನೆ ಅಂತ ಯಾರಿಗೂ ಗೊತ್ತಿಲ್ಲ ಸಾರ್. ಅವನ ಫೋನ್ ಕೂಡ ಔಟ್ ಆಫ್ ರೀಚ್'.

'ಹೌದಾ ವಿನಯ್... ಓಕೆ ವಿ ವಿಲ್ ಸೀ ದಟ್...'

8

ಬೆಂಗಳೂರಿಗೆ ಹಿಂದಿರುಗುವ ಮುನ್ನ ಮಡಿಕೇರಿಯಲ್ಲಿ ಇನ್ನೂ ಎರಡು ಕೆಲಸಗಳು ಬಾಕಿ ಇತ್ತು. ಒಂದು, ವಿಜಯಮ್ಮನವರ ತಮ್ಮ ರವಿಯನ್ನು ನೋಡಿ ಮಾತನಾಡುವುದು. ಇನ್ನೊಂದು, ಎಸ್ಟೇಟ್ ಮ್ಯಾನೇಜರ್ ಚಂದ್ರನ್. ಮಾಯಣ್ಣನ ತಂಡ ಮತ್ತೆ ಅಮ್ಮು ಅವರ ಎಸ್ಟೇಟ್ ಬಂಗಲೆಗೆ ಬಂದಾಗ ಒಳಗೆ ನಡುಮನೆಯಲ್ಲಿ ವಿಜಯಮ್ಮನವರು ತಮ್ಮ ಮಕ್ಕಳೊಂದಿಗೆ ಕೇರಮ್ ಆಡುತ್ತಿದ್ದರು.

ಒಳಕ್ಕೆ ಬಂದ ಮಾಯಣ್ಣ, ವಿಜಯಮ್ಮನವರನ್ನು ಕುರಿತು–

'ರವಿ ಅವರ ಫ್ರೆಂಡ್ ವಿನೋದ್ ಹೇಳುದ್ರಂತೆ, ರವಿ, ಅವರ ರೂಮಲ್ಲೇ ಇದ್ದಾರೆ ಅಂತ, ಅದಕ್ಕೆ ಬಂದ್ವಿ... ಎಲ್ಲಿದ್ದಾರೆ ರವಿ?'

'ಅವನು ಇನ್ನೂ ಬಂದ ಹಾಗಿಲ್ಲ... ಮೇಲೆ ಅವನದು ಒಂದು ಪ್ರತ್ಯೇಕ ರೂಮಿದೆ, ಅಲ್ಲಿ ಇರಬಹುದೇನೋ... ಒಮ್ಮೆ ನೀವೇ ನೋಡಿ... ಮೆಟ್ಟಿಲು ಆ ಬದಿಗೆ ಹೊರಗೇ ಇದೆ'.

'ಸರಿ ನೋಡ್ತೀವಿ... ಭುಜಂಗ, ಹೇಗೂ ಕೇರಮ್ ನಿಮ್ಮ ಮೆಚ್ಚಿನ ಆಟ, ನೀವು ಇವರ ಜೊತೆ ಆಡ್ತಾ ಇರಿ. ನಾನು, ವಿನಯ್, ಮೇಲೆ ಹೋಗಿ ಒಂದರ್ಧ ಗಂಟೆ ರವಿ ಜೊತೆ ಮಾತಾಡಿ ಬರ್ತೀವಿ... ಏನು...'

'ಥ್ಯಾಂಕ್ ಯು ಸಾರ್...'

ಮೆಟ್ಟಿಲೇರಿ ಬಂಗಲೆಯ ಮೇಲಿನ ತಾರಸಿಗೆ ಬಂದಾಗ ಎದುರಿಗೇ ಇತ್ತು, ಸಣ್ಣ ಬೀಗ ಜಡಿದ, ಒಂದು ಬಿಡಿ ಕೋಣೆ. ಮಾಯಣ್ಣನಿಗೆ ಒಂದು ಅಭ್ಯಾಸವಿತ್ತು, ತನ್ನ ಠಾಣೆಯಲ್ಲಿ ಸಿಕ್ಕಿಬಿದ್ದ ವಾಹನಗಳ್ಳರು, ಮನೆಗಳ್ಳರು, ಕಿಸೆಗಳ್ಳರು, ಸರಗಳ್ಳರು, ಯಾರೇ ಅಪರಾಧಿಗಳಿರಲಿ, ಅವರುಗಳನ್ನು ತನ್ನ ಠಾಣೆಗೆ ಬಂದ ಅತಿಥಿ ಪರಿಣಿತರೆಂದೇ ತಿಳಿದು, ಅವರ ಕೌಶಲ್ಯಗಳನ್ನು ಅವರಿಂದಲೇ ಅರಿತುಕೊಳ್ಳುವುದು. ಅಪರಾಧಗಳ ಪತ್ತೆ ಮತ್ತು ತನಿಖಾ ಕಾರ್ಯಗಳಲ್ಲಿ ಇದು ಬಹಳ ಉಪಯೋಗಕ್ಕೆ ಬರುತ್ತಿತ್ತು. ತಂತಿ ಬಗ್ಗಿಸಿ, ತಿರುಗಿಸಿ ಬೀಗಗಳನ್ನು ತೆಗೆಯುವುದನ್ನು ಕಲಿತದ್ದು ಹಾಗೆಯೇ. ಐದೇ ನಿಮಿಷದಲ್ಲಿ ಬೀಗ ಕಳಚಿ ರವಿಯ ಸ್ಪೆಷಲ್ ರೂಮಿಗೆ ಪ್ರವೇಶ ಸಿಕ್ಕಿತ್ತು. ವ್ಯಸನಿಗಳ ವೃಂದ, ಒಂದಾಗಿ ಕೂತು ನಶೆ ಏರಿಸಿಕೊಳ್ಳಲು, ಹುಕ್ಕಾಚಿಲುಮೆ ಇನ್ನಿತರ ಪರಿಕರಗಳಿಂದ ಸಜ್ಜಿತವಾದ ಅಡ್ಡ. ಗಾಂಜಾ ಸೊಪ್ಪು ತುಂಬಲು, ಸಿಗರೇಟುಗಳಿಂದ ಖಾಲಿ ಮಾಡಿ ನೆಲದಲ್ಲಿ ಚೆಲ್ಲಾಡಿದ್ದ ಹೊಗೆಸೊಪ್ಪಿನ ಹುಡಿಗಳು, ಸಿಗರೇಟು ತುಂಡುಗಳಿಂದ ತುಂಬಿ ತುಳುಕುತ್ತಿದ್ದ ಬೂದಿ ಬಟ್ಟಲು, ಎಲ್ಲೆಂದರಲ್ಲಿ ಬಿದ್ದಿದ್ದ ಮದ್ಯದ ಖಾಲಿ ಶೀಷೆಗಳು, ಇಂಥಾ ಈ ಚಟದಾಸರ ಕೂಟದ ಕೋಣೆಯನ್ನು ಹತ್ತು ನಿಮಿಷ ಎಡಬಿಡದೆ ತಡಕಾಡಿದ್ದಕ್ಕೆ ಸಿಕ್ಕ ಒಂದು ಮುಖ್ಯವಾದ ಐಟಂ ಅಂದರೆ, ಒಂದು ನಕಲು ಮಾಡಿದ ಅಮ್ಮುವಿನ ಉಯಿಲು ಪತ್ರ. ಮೇಲೆ ಅಟ್ಟದಂತಿದ್ದ ಜಾಗದಲ್ಲಿ ಒಂದು ಸೂಟ್‌ಕೇಸ್‌ನ ತಳದ ವೇಸ್ಟ್ ನ್ಯೂಸ್ ಪೇಪರುಗಳ ನಡುವೆ ಇಟ್ಟಿದ್ದ ಈ ಫೇಕ್ ವಿಲ್ ಪ್ರಕಾರ, ಅಮ್ಮು ಮತ್ತು ರವಿ ಎಂಟು ತಿಂಗಳ ಹಿಂದೆ ಕೊಡವರು ಆಸ್ಥೆಯಿಂದ ನಡೆದುಕೊಳ್ಳುವ ಇಗ್ಗುತಪ್ಪನ ದೇವಳದಲ್ಲಿ, ಆತ್ಮೀಯರ ಹಾಗೂ ಕುಟುಂಬದ ಹಿತೈಷಿಗಳಾದ ಗಣಪತಿಯವರ ಸಮ್ಮುಖದಲ್ಲಿ ಮದುವೆಯಾಗಿದ್ದು, ತದನಂತರದಲ್ಲಿ ತಾನು ತನ್ನ ನಟನಾ ವೃತ್ತಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುವುದರಿಂದ, ಎಸ್ಟೇಟಿನ ಸಕಲ ಉಸ್ತುವಾರಿ ಹಾಗೂ ಪರಭಾರೆಯ ಹಕ್ಕನ್ನು ಶಾಶ್ವತವಾಗಿ, ತನ್ನ ಪತಿಯಾದ ರವಿಗೆ ಹಸ್ತಾಂತರ ಮಾಡಿದಂಥ ಮರಣಪತ್ರ.

'ವಿನಯ್ ಐ ಥಿಂಕ್ ಹಿ ಈಸ್ ಡೀಪ್... ವೆರಿ ಡೀಪ್... ಅಂತಿಂಥ ಆಸಾಮಿಯಲ್ಲ ಈ ರವಿ... ಇಷ್ಟೆಲ್ಲಾ ತಯಾರಿ ನಡೆಸಿದ್ದಾನೆ ಅಂದರೆ ಇವನು ಪಳಗಿದ ಕ್ರಿಮಿನಲ್ಲೇ ಆಗಿರಬೇಕು' ತನಿಖಾ ಪ್ರಕ್ರಿಯೆಯಲ್ಲಿ ಇನ್ನೊಂದು ಕಿಟಕಿ ತೆರೆದುಕೊಂಡಿತ್ತು. ಆ ನಕಲಿ ವಿಲ್ಲನ್ನು ಜೋಪಾನವಾಗಿ ತೆಗೆದಿಟ್ಟು, ಬೀಗವನ್ನು ಮೊದಲಿನಂತೆ ಹಾಕಿ, ಅಮ್ಮು ಬಂಗಲೆಯ ಮೇಲಿನ ಈ ಹುತ್ತದಿಂದ ಕೆಳಗಿನ ನಡುಮನೆಗೆ ಬಂದ ಮಾಯಣ್ಣ ಮತ್ತು ವಿನಯ್, ವಿಜಯಮ್ಮನವರನ್ನು ಕುರಿತು–

'ನೀವು ಹೇಳಿದ್ದು ಸರಿ... ರವಿಯವರು ಇನ್ನೂ ಬಂದಿಲ್ಲ... ತಾರಸಿಯಿಂದ ಒಳ್ಳೆ ಸೀನರಿ ಇದೆ... ಹಾಗೇ ತಂಪುಗಾಳಿಯಲ್ಲಿ, ಅದನ್ನು ನೋಡುತ್ತಾ ನಿಂತುಬಿಟ್ಟಿದ್ದೆವು... ಆಯ್ತು, ರವಿಯವರು ಬಂದ ನಂತರ ನೀವೋ ಅವರೋ ಫೋನ್ ಮಾಡಿ... ನಿಮ್ಮ ಎಸ್ಟೇಟಿನಿಂದ ಹೋಗುವುದಕ್ಕೆ ಮುಂಚೆ ಆ ನದಿ ದಡದ ಮಂಟಪದಲ್ಲಿ ಒಂದತ್ತು ನಿಮಿಷ ಕುಳಿತು ಹೋಗೋಣ ಅಂತ... ಬಾಳ ಪ್ರಶಾಂತವಾಗಿ ಕಾಣುತ್ತೆ'.

'ಅಡ್ಡಿ ಇಲ್ಲ... ಏನಾದರೂ ತಿಂಡಿ ಮಾಡಿ ಕಳಿಸಿಕೊಡಲಾ?'

'ಥ್ಯಾಂಕ್ಸ್... ದಯವಿಟ್ಟು ಏನೂ ಬೇಡಿ...' ಎನ್ನುತ್ತಾ ಆಚೆ ಬಂದಿತ್ತು ಮಾಯಣ್ಣನ ತಂಡ. ಕಾವೇರಿಯು ಅಮ್ಮು ಅವರ ಎಸ್ಟೇಟನ್ನು ಸ್ಪರ್ಶಿಸಿಯೇ ಹೋಗುವ ಹಟಕ್ಕೆ ಬಿದ್ದಂತೆ ಬಳುಕಿ, ಒಂದು ಇನ್ನೂರು ಅಡಿಯಷ್ಟು ಎಸ್ಟೇಟಿನ ಹಸುರು ರಾಶಿಯ ಅಂಚನ್ನು ತಾಗಿಕೊಂಡು ಹರಿದು ಹೋಗುತ್ತಿದ್ದಳು. ನದಿಯ ದಡದಲ್ಲಿ ಅಡ್ಡಾದಿಡ್ಡಿಯಾಗಿ ಬಿದ್ದುಕೊಂಡ, ಎಲ್ಲಾ ಆಕಾರ ಮತ್ತು ಗಾತ್ರದ ಬಂಡೆಗಳು, ದೂರಕ್ಕೆ ಹಸಿರು ಸೀರೆ ಸೆರಗಂಚಿನ ಕಸೂತಿ ಕೆಲಸದಂತೆ ಕಾಣುತ್ತಿತ್ತು. ಸಹಸ್ರಾರು ವರ್ಷ ನೆತ್ತಿಯ ಮೇಲೆ ಸುರಿದ ಮಳೆಗೆ, ಬಳಸಿ ರಭಸದಿಂದ ಹರಿವ ನದಿ ನೀರಿಗೆ, ಎಲ್ಲೆಡೆ ಸಮವಾಗಿ ಸವೆದು, ಉರುಟು ಉರುಟಾದ ಬಂಡೆಗಳು, ನೀರಿಂದ ಮೇಲೆದ್ದು ಇಣುಕುವ ದ್ವೀಪ ಸಮೂಹದಂತೆ ಕಣ್ಣಿಗೆ ಮೋಡಿ ಮಾಡುತ್ತಿತ್ತು. ಮನುಷ್ಯನದು ಕೆತ್ತಿ ಮಾಡಿದ ಶಿಲ್ಪವಾದರೆ, ನೀರಿನದು ಕೊರೆದು ಮಾಡುವ ಶಿಲ್ಪ. ಅಣತಿ ದೂರದಲ್ಲೇ ಸ್ವಲ್ಪ ಎತ್ತರವಾದ ಜಾಗದಲ್ಲಿ ಕಟ್ಟಿದ ಈ ಮಂಟಪದಿಂದ ಕಾಣುವ ದೃಶ್ಯ, ಸೌಂದರ್ಯ ಮತ್ತು ಪ್ರಶಾಂತತೆ ಹದವಾಗಿ ಮಿಳಿತವಾದ ಭಾವವನ್ನು ಸೃಜಿಸುತ್ತಿತ್ತು. ಆ ದೃಶ್ಯ ವೈಭವಕ್ಕೆ ಮಾರುಹೋದಂತೆ, ಮೂವರೂ ಮಾತಿಲ್ಲದೆ ಮಂಟಪದ ಅಂಚಲ್ಲಿ ಕುಳಿತುಬಿಟ್ಟಿದ್ದರು.

ಇದೇ ಮಂಟಪದ ಮೇಲೆ ಸುಮಾರು ಹತ್ತು ತಿಂಗಳ ಹಿಂದೆ, ಪುತ್ತರಿ ಹಬ್ಬದ ಹಿಂದಿನ ದಿನ ನಡೆದ ಒಂದು ಅಸಾಮಾನ್ಯ ಘಟನೆಯು, ಈ ಮೂವರಿಗೆ ತಿಳಿದಿರಲಿಲ್ಲ. ಅಂದು ಸಮಯ ಸಂಜೆ ಐದಿರಬಹುದು... ಎಸ್ಟೇಟಿಗೆ ಅನಿರೀಕ್ಷಿತವಾಗಿ ಅಂದೇ ಬಂದಿದ್ದ ಅಮ್ಮು, ತನ್ನ ತಂದೆಯ ಜೊತೆಗೆ, ಇದೇ ಮಂಟಪದ ಮೇಲೆ ಕುಳಿತು ಮಾತನಾಡುತ್ತಾ, ಸಂಜೆಯ ಸೊಬಗನ್ನು ಸವಿದ ಕ್ಷಣಗಳನ್ನು, ಅಲ್ಲೇ ಕೂತು ಮತ್ತೆ ಮೆಲುಕಲು ಬಂದಿದ್ದಳು. ಅದರಿಂದಿನ ವಾರ ಎಸ್ಟೇಟಿಗೆ ಒಂದು ಕರಡಿ ನುಗ್ಗಿತ್ತಾದ್ದರಿಂದ ಚಂದ್ರನ್ ಕೋವಿ ಹಿಡಿದು ಜೊತೆಗೆ ಬಂದಿದ್ದ. ಅಲ್ಲಿ ಮಂಟಪ ಆಗಲೇ ಭರ್ತಿಯಾಗಿತ್ತು, ರವಿ ಮತ್ತು ಅವನ ಬೀಡಾಡಿ ಸ್ನೇಹಿತರ ಪಾನಗೋಷ್ಠಿ ಎಗ್ಗಿಲ್ಲದೆ ಸಾಗಿತ್ತು. ಅದೇ ಇನ್ನೊಂದು ಭಾಗದಲ್ಲಿ, ಮೂರು ಜನರ ತಂಡ ಸರ್ವೆ ಕೆಲಸ ನಡೆಸಿದ್ದರು... ಒಂದಷ್ಟು ದೂರದಲ್ಲಿ ತನ್ನಿಬ್ಬರು ಸಹಚರರೊಡನೆ ನಿಂತಿದ್ದ ಗಣಪತಿ ಅವರಿಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದ. ಅಮ್ಮುಗೆ ಇದೆಲ್ಲವನ್ನೂ ಒಟ್ಟಿಗೆ ನೋಡಿ ಬೆಂಕಿಯಂಥ ಕೋಪ ಬಂದು, ಚಂದ್ರನ್ ಕೈಯಿಂದ ಕೋವಿ ಕಸಿದುಕೊಂಡು ಸೀದಾ ಸರ್ವೆ ಕೆಲಸದಲ್ಲಿದ್ದವರ ಕಡೆ ನಡೆದು,

'ಯಾರ ಅನುಮತಿಯಿಂದ ಇಲ್ಲಿ ಒಳಗೆ ಬಂದು ಈ ಕೆಲಸ ಮಾಡುತ್ತಿದ್ದೀರಿ?' ಎನ್ನಲು... ಅವಳ ವ್ಯಗ್ರತೆಯನ್ನು ಕಂಡು ಗಾಬರಿಯಿಂದ,

'ಮೇಡಮ್... ಗಣಪತಿಯವರು ನಮ್ಮನ್ನು ಕರೆಸಿದ್ದಾರೆ' ಎನ್ನಲು ಅಮ್ಮು ಈಗ ಗಣಪತಿಯ ಕಡೆ ತಿರುಗಿ–

'ನಮ್ಮ ಎಸ್ಟೇಟಿನಲ್ಲಿ ಸರ್ವೆ ಮಾಡಿಸಲು ನೀವ್ಯಾರು... ನಮ್ಮ ಚಿಕ್ಕಮ್ಮ ಏನಾದರೂ ನಿಮಗೆ ಹೇಳಿದ್ದಾರ?'

(ಸಶೇಷ)